
ಪಿ. ಜಯವಂತ ಪೈ, ಕುಂದಾಪುರ
ಜೈಲಿಗೂ ರೈಲಿಗೂ ವ್ಯತ್ಯಾಸವೇನು?



ಜೈಲಿಗೆ ಅಡ್ವಾನ್ಸ್ ಬುಕಿಂಗ್‌ನ ಅಗತ್ಯವಿಲ್ಲ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ಪರೀಕ್ಷೆಯಲ್ಲಿ ಒಂದು ಸಾರಿ ಕೆಮ್ಮಿದರೆ ಉತ್ತರ ಬರುತ್ತದೆ. ಪದೇ ಪದೇ ಕೆಮ್ಮಿದರೆ ಏನು ಬರುತ್ತದೆ?
ಇನ್ವಿಜಿಲೇಟರಿಂದ ಸಂಶಯದ ನೋಟ.

ಎಸ್ಸೆನ್ ಮಹಾಬಲರಾವ್, ಎನ್ನಾರ್ಪುರ
ತಿನ್ನಿ ಎಂದಮಾತ್ರಕ್ಕೆ ತಿಂದುಬಿಡೋದೆ?
ನಿಜ. ಎಂದೂ ಕೊಡದವರು ಕೊಟ್ಟಿದ್ದಾರೆಂದರೆ ಎಡವಟ್ಟೇ ಎಂದು ಯೋಚಿಸಬೇಕಿತ್ತು.

ಮಲ್ಲಿಕಾರ್ಜುನ, ಸುರಧೇನುಪುರ
ಮನಸ್ಸಿದ್ದರೆ ಮಾರ್ಗ. ಮನೆಯಲ್ಲಿದ್ದರೆ?
ಮನೆಯವರಿಂದ ಮಾರ್ಗದರ್ಶನ.

ರಮೇಶ ಜಿ. ಬೊಂಗಾಳೆ, ಬೈಲಹೊಂಗಲ
ಪ್ರೀತಿಯನ್ನು ತೋರ್ಪಡಿಸಲು ಮುಳ್ಳಿನ ಗುಲಾಬಿಯನ್ನೇ ಕೊಡುತ್ತಾರಲ್ಲ ಸರ್?



ಎಚ್ಚರ – ಮುಂದೆ ಮುಳ್ಳಿನ ಹಾದಿ ಇದೆ ಎಂಬ ಸೈಲೆಂಟ್ ಸ್ಲೋಗನ್ ಅದು.

ಚನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
ಭಾರತವು ಎಲ್ಲ ಕ್ರೀಡೆಗಳಲ್ಲೂ ಕೀರ್ತಿಪತಾಕೆ ಹಾರಿಸುವುದು ಯಾವಾಗ ರಾಮ್?
ಜಾತಿಯ ಧ್ವಜಗಳು ಕೆಳಗಿಳಿದು ಅರ್ಹತೆಯ ಧ್ವಜಗಳು ಮಾತ್ರ ಮೇಲೇರಿದಾಗ.

ದಿನೇಶ್, ಗುಡ್ಡದೂರು
ಇಂದಿನ ಚಲನಚಿತ್ರಗಳಲ್ಲಿ ನಾಯಕನಟರು ಗಡ್ಡ ಬಿಡಲು ಕಾರಣವೇನು?
ಬೋಳಿಸಿಕೊಳ್ಳುವವರೇ ಹೆಚ್ಚಾಗಿರುವ ಚಿತ್ರರಂಗದಲ್ಲಿ ಬೋಳಿಸಿಕೊಳ್ಳದವನೇ ಹೀರೊ ಎಂಬ ಅಭಿಪ್ರಾಯವಂತೆ!

ಹೆಸರು ಬೇಡ, ಲಿಂಗಸುಗೂರು
ಜೀವನದಲ್ಲಿ ತುಂಬಾ ಬೇಸರವಾದಾಗ ಏನು ಮಾಡಬೇಕು?
ಜನರನ್ನು ಬದಲಿಸಲಾಗದು; ದೃಷ್ಟಿ ಬದಲಾಯಿಸಿ; ಎಲ್ಲ ವಿಫಲವಾದರೂ ತಾಳ್ಮೆ ಸಫಲವಾಗುತ್ತದೆ.

ಮಹಾವೀರ ಕಾಸರ, ಶಿವಮೊಗ್ಗ
ಜ್ಯೋತಿಷಿಗಳು ಹೇಳುವ ದುಬಾರಿ ಪೂಜೆಗಳನ್ನು ಮಾಡಿಸುವುದರಿಂದ ಅನುಕೂಲ ಯಾರಿಗೆ?
ಜ್ಯೋತಿಷಿಗಳಿಗೆ.

ಪಿ. ಶಂಕರಪ್ಪ, ಶಿವಮೊಗ್ಗ
ಶೇ. 10, ಶೇ. 40 ಎಂದು ಕಿತ್ತಾಡುವ ಬದಲು ಲಂಚವನ್ನು ಕಾನೂನುಬದ್ಧವೆಂದು ಬೋರ್ಡ್ ಹಾಕಿದರೆ ಒಳಿತಲ್ಲವೆ?
ಬೋರ್ಡ್ ಮೇಲೊಂದು ಬಟ್ಟೆ ಹೊದಿಸಿ ಅದನ್ನು ತೋರಲೂ ಲಂಚ ಕೇಳುವರಂತೆ.

ಬಾ.ರಂ. ಸುರೇಶ್, ಶಿವಮೊಗ್ಗ
ವಿವಾಹಿತಳಿಗೆ ತಾಳಿ, ಕರಿಮಣಿ ಸರ ಪವಿತ್ರ. ಆದರೆ ಇತ್ತೀಚೆಗೆ ಅದನ್ನು ತೆಗೆದಿಡುತ್ತಿದ್ದಾರಲ್ಲ?
ಸರಗಳ್ಳರು ಆ ಪವಿತ್ರಕ್ಕೆ ಕೈಹಾಕಿ ಅಪವಿತ್ರಗೊಳಿಸದಿರಲೆಂದು.

ಎನ್.ಆರ್. ತಮ್ಮಯ್ಯಶೆಟ್ಟಿ, ಅರಸಿಕೆರೆ
ಕಳೆದುಹೋದ ಮರ್ಯಾದೆಯನ್ನು ಮರಳಿ ಪಡೆಯುವುದು ಹೇಗೆ ಸಾರ್?
ಜೈಲಿನಿಂದಲೇ ಚೇಲಾಗಳಿಗೆ ಹಣ ತಲುಪಿಸಿ, ಕೊಂಬುಕಹಳೆಗಳ ಸಮೇತ ಹೊರಬನ್ನಿ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
ಗಂಡನ್ನು ಉಂಡಾಡಿ ಗುಂಡ ಎನ್ನುವಂತೆ ಹೆಣ್ಣನ್ನು ಏನೆನ್ನಬಹುದು?
ಗುಂಡನನ್ನು ಗಂಡನನ್ನಾಗಿಸುವ ಲಗಾಮು.

ಬಿ. ಚಂದ್ರೇಗೌಡ, ಬೆಂಗಳೂರು
ತ್ರಿಶಂಕು ಸ್ವರ್ಗ ಇರುವ ಹಾಗೆ ತ್ರಿಶಂಕು ನರಕ ಇಲ್ಲವೆ?
ಅಗತ್ಯವಿಲ್ಲ. ಅದು ಪರ್ಮನೆಂಟ್ ಶೀರ್ಷಾಸನದಲ್ಲಿರಬೇಕಾದ ಟೂ ಇನ್ ಒನ್.

## ವಾರದ ಪ್ರಶ್ನೆ

ಭಾರತೀ ಗಂಗಾಧರ್, ಬೆಂಗಳೂರು
ತಲೆಯಲ್ಲಿ ಯಾವಾಗಲೂ ಕಪ್ಪುಕೂದಲೇ ಉದುರುತ್ತದೆ, ಬೇಡದ ಬಿಳಿಯ ಕೂದಲು ಅಲ್ಲೇ ಇರುತ್ತೆ. ಏಕೆ?
ಕಪ್ಪು ಯೌವನ – ಚಂಚಲ. ಬಿಳಿ ಮುಪ್ಪು – ಅಚಲ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ಅಗಸನ ಮಾತಿಗೆ ರಾಮ ಸೀತೆಯನ್ನು ಕಾಡಿಗಟ್ಟಿದ. ನಮ್ಮ ಮಂತ್ರಿಗಳು ನಾವೇನೆಂದರೂ ರಾಜೀನಾಮೆ ನೀಡರಲ್ಲ?
ಅವನು ಮರ್ಯಾದಾಪುರುಷೋತ್ತಮ. ಇವರದು ಮರ್ಯಾದೆಯಿರದ Poor show ತಮ್ಮಾ.

ವಿ. ಹೇಮಂತಕುಮಾರ್, ಬೆಂಗಳೂರು
ಮಿಂಚು ಮೈಯಲಿ ಗುಡುಗು ಎದೆಯಲಿ ಎಂದು ಹೇಳುತ್ತಾಳಲ್ಲಾ...?
ಓಹ್! ಸ್ಟೆತಾಸ್ಕೋಪ್ ಇಟ್ಟ ಡಾಕ್ಟರ್ ಶಾಕ್ ಹೊಡೆದು, ಕಿವಿ ಒಡೆದು ಹರೋಹರ!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಹಣಕ್ಕೂ ಆರೋಗ್ಯಕ್ಕೂ ಎಷ್ಟು ದೂರ?



ಸುಮಾರು ಇಪ್ಪತ್ತು ಅಡಿಗಳು; ನರ್ಸಿಂಗ್‌ಹೋಂನ ಕೌಂಟರಲ್ಲಿ ಹಣ; ವಾರ್ಡಲ್ಲಿ ಆರೋಗ್ಯ.

ಎಚ್. ಸಿದ್ಧಾರ್ಥ, ಈದು ಗ್ರಾಮ
ಪ್ರಪಂಚದಲ್ಲಿ ಪ್ರಾಮಾಣಿಕರಿಗೆ ಸಿಗುವ ನಿಜವಾದ 'ಪ್ರಮಾಣಪತ್ರ' ಯಾವುದು?
'ಪ್ರಮಾಣವಾಗಿಯೂ ಅವನು ಈಗಿನ್ಕಾಲಕ್ಕೆ ನಾಲಾಯಕ್ ಗುರು' ಎಂಬ ಮಾತು.

ಎಚ್. ಸಿದ್ಧಾರ್ಥ, ಈದು ಗ್ರಾಮ
clue, glue ಈ ಎರಡರಲ್ಲಿ ಯಾವುದು ಉಪಯುಕ್ತ?
ಅನ್ಯಳೊಂದಿಗೆ ಗ್ಲೂ ಆಗಿರುವ ಕ್ಲೂ ಹೆಂಡತಿಗಂತೂ ಉಪಯುಕ್ತ.

■ ರಾಮ್